# ಭರವಸೆಯನ್ನು ಬಿಟ್ಟುಕೊಡದ ಮೈನಾ

**ವಿಜಯಲಕ್ಷ್ಮಿ**
ಉದಯದ 'ಮೈನಾ'
ನಾಯಕಿ



◆ **ಬಣ್ಣದ ಲೋಕ ನಿಮಗೆ ಆಕರ್ಷಣೆ ಆಗಿದ್ದು ಹೇಗೆ?**

ಆಡಿಷನ್ ನೀಡುತ್ತಲೇ ಅವಕಾಶ ಪಡೆದೆ. ಕಾಲೇಜು ದಿನಗಳಿಂದಲೂ ಇದು ನನಗೆ ಪ್ಯಾಷನ್ ಆಗಿತ್ತು. ನಿರಂತರ ಪರಿಶ್ರಮದಿಂದ ಇದು ಸಾಧ್ಯ ಆಯಿತು. ಪಿಯು ಓದುತ್ತಿದ್ದಾಗ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ತೊಡಗಿಕೊಂಡೆ. ಅದು ನನ್ನಲ್ಲಿ ಈ ಆಸೆಯನ್ನು ಹುಟ್ಟಿಸಿತು. ನಾಯಕಿ ಆಗಬೇಕು, ಪ್ರಮುಖ ಪಾತ್ರವನ್ನೇ ಮಾಡಬೇಕು ಎಂದು ಯೋಚಿಸಿರಲಿಲ್ಲ. ಒಂದು ಪಾತ್ರವಾಗಿ ನಾನು ಕಾಣಿಸಿಕೊಳ್ಳಬೇಕಿತ್ತು. ದೇವರ ದಯೆಯಿಂದ 'ಲಕ್ಷಣ'ದಲ್ಲಿ ಲೀಡ್ ಮಾಡಿದೆ. ಅದು ನನಗೆ ತುಂಬ ಖುಷಿ ಕೊಟ್ಟಿದೆ. ಅದು ನನ್ನ ಮೊದಲ ಧಾರಾವಾಹಿ. ಈಗಲೂ ಜನ 'ಲಕ್ಷಣ'ದ ಹೆಸರಿನಲ್ಲಿಯೇ ಗುರುತಿಸುತ್ತಾರೆ. ಅದು ಮುಗಿದ ತಕ್ಷಣ ಈ ಅವಕಾಶ ಸಿಕ್ಕಿದೆ. ವಿಚಿತ್ರ ಏನೆಂದರೆ, ಪಿಯುಸಿ ಇದ್ದಾಗ ನಟನೆಯ ಮನಸು ಮಾಡಿದ್ದೆ. ಬಿಎಸ್‌ಸಿ ಮೊದಲ ವರ್ಷದಿಂದಲೇ ಆಡಿಷನ್ ಕೊಡಲು ಆರಂಭಿಸಿದೆ. ಎಲ್ಲೂ ನನಗೆ ಅಂತಹ ಅವಕಾಶವೇ ಸಿಗಲಿಲ್ಲ. ಗಣಿತದಲ್ಲಿ ಎಂಎಸ್‌ಸಿ ಓದುತ್ತಿದ್ದೆ ಆಗ, 'ಯುವರತ್ನ'ದಲ್ಲಿ ಅಪ್ಪು ಸರ್ ಜೊತೆ ಚಿಕ್ಕ ಪಾತ್ರದಲ್ಲಿ ಕಾಣಿಸಿಕೊಳ್ಳುವ ಯೋಗ ಸಿಕ್ಕಿತು. ಪಿಜಿ ಮುಗಿಸಿ ಇನ್ನೇನು ಉದ್ಯೋಗ ಹುಡುಕುವಾಗ ಆಕಸ್ಮಿಕವಾಗಿ ನಟಿಸುವ ಯೋಗ ಸಿಕ್ಕಿತು. ಅದೇ ಉದ್ಯೋಗ ಎಂದು ಅಂದುಕೊಂಡಿದ್ದೇನೆ.

◆ **ನಿಮ್ಮ ಆಸೆಗೆ ಕುಟುಂಬದ ಬೆಂಬಲ ಹೇಗಿದೆ?**

ಕೋಲಾರ ಜಿಲ್ಲೆಯ ಮಾಲೂರು ನಮ್ಮೂರು. ಅಪ್ಪ: ರಾಧಾಕೃಷ್ಣ, ಪ್ರಾವಿಜನ್ ಸ್ಟೋರ್ ಇಟ್ಟಿದ್ದಾರೆ. ಅಮ್ಮ: ಉದಯಲಕ್ಷ್ಮಿ, ಮನೆಯನ್ನು ನೋಡಿಕೊಳ್ಳುತ್ತಾರೆ. ನಾನೊಬ್ಬಳೆ ಮಗಳು. ಪೋಷಕರ ಅಪೇಕ್ಷೆಯಂತೆ ಅಧ್ಯಾಪನ ಮಾಡಬೇಕಿತ್ತು. ಅದನ್ನು ಬಿಟ್ಟು, ನನ್ನ ಇಷ್ಟದ ಅಭಿನಯ ಕ್ಷೇತ್ರಕ್ಕೆ ಬರುವುದು ಸ್ವಲ್ಪ ಕಷ್ಟ ಆಗಿತ್ತು. ಮನೆಯಲ್ಲಿ ಹೋರಾಟ ಮಾಡಿ ಅವರನ್ನು ಒಪ್ಪಿಸಿದೆ. ಅಪ್ಪ–ಅಮ್ಮ ಇಬ್ಬರೂ ಒಮ್ಮತದಿಂದ ನನ್ನ ಅಭಿಪ್ರಾಯಕ್ಕೆ ಸಮ್ಮತಿಸಿದ್ದಾರೆ. ಅವರು ಒಂದು ವರ್ಷ ಕಾಲಾವಕಾಶ ಕೊಟ್ಟಿದ್ದರು, ಆಗದಿದ್ದರೆ ಅಧ್ಯಾಪಕಿ ಆಗಬೇಕು ಎಂದು ತಾಕೀತು ಮಾಡಿದ್ದರು. ನನ್ನ ಆಸೆಯಂತೆ ನನ್ನ ಬದುಕನ್ನು ರೂಪಿಸಿಕೊಳ್ಳುತ್ತಿದ್ದೇನೆ. ಆ ವಿಷಯದಲ್ಲಿ ತುಂಬ ಖುಷಿ ಇದೆ.

◆ **ನಿಮ್ಮ ಪಾತ್ರ ಹೇಗಿದೆ?**

ಇದರಲ್ಲಿ ಮೈನಾ ಪಾತ್ರವನ್ನು ಮಾಡುತ್ತಿದ್ದೇನೆ. ತುಂಬ ಶಕ್ತಿಶಾಲಿ ಪಾತ್ರ. ಇಂತಹ ಪಾತ್ರ ಸಿಗುವುದೇ ಅಪರೂಪ ಎಂದು ಅನ್ನಿಸುತ್ತದೆ. ಭೌತಿಕ ಮತ್ತು ಬೌದ್ಧಿಕವಾಗಿ ತುಂಬ ಸಮರ್ಥವಾಗಿರುವ ಪಾತ್ರ. ಅದರಲ್ಲಿ ಓಡುತ್ತೇನೆ, ಬೀಳುತ್ತೇನೆ, ಏಳುತ್ತೇನೆ ಮತ್ತೆ ಗುರಿಯತ್ತ ದೃಷ್ಟಿಯನ್ನು ನೆಟ್ಟು ನೋಡುತ್ತೇನೆ. ಪ್ರತಿ ಸೀನ್‌ನಲ್ಲಿಯೂ ಒಂದು ವಿಶೇಷ ಇದ್ದೇ ಇರುತ್ತದೆ. ಕಿರಿಯ ಮಗಳಾಗಿದ್ದು, ಹಿರಿಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಮನೆಯಲ್ಲಿ ಇನ್ನೂ ಚಿಕ್ಕಹುಡುಗಿ, ಮಕ್ಕಳ ಜೊತೆ ಬೆರೆಯುತ್ತೇನೆ. ಯಾವ ಒತ್ತಡವೂ ಇಲ್ಲದೆ ಖುಷಿಯಿಂದ ನಲಿಯುತ್ತೇನೆ. ಮಕ್ಕಳ ಜೊತೆ ಆಟ ಆಡಿಕೊಂಡಿರುವವಳಿಗೆ ಮನೆಯ ಜವಾಬ್ದಾರಿ ಸಿಕ್ಕರೆ ಹೇಗೆ? ನನ್ನ ಯೋಚನೆ ಕೂಡ ಅಷ್ಟೇ ಪ್ರಬುದ್ಧವಾಗಿದೆ. ಚಿಕ್ಕಮಕ್ಕಳ ಜೊತೆ ಅಭಿನಯಿಸುವ ಅವಕಾಶ ಕೂಡ ಅದ್ಭುತವೇ ಸರಿ. ಬಾಲ್ಯವನ್ನು ಕಳೆದುಕೊಂಡು ವರ್ಷಗಳೇ ಉರುಳಿವೆ. ಈಗ ಅದನ್ನು ರಿಕಾಲ್ ಮಾಡುವಂತೆ ಆಗಿದೆ. ತುಂಬ ಎಂಜಾಯ್ ಮಾಡುತ್ತಿದ್ದೇನೆ.

ಮೈನಾ ಅಪ್ಪನ ಮುದ್ದಿನ ಮಗಳು. ಅಪ್ಪನ ಪಾತ್ರವನ್ನು ನಾಗಾಭರಣ ಅವರು ಮಾಡುತ್ತಿದ್ದಾರೆ. ಅದು ಇನ್ನೂ ಸಂತೋಷವನ್ನು ಕೊಡ್ತಾ ಇದೆ. ಪಾತ್ರಕ್ಕೆ ತುಂಬ ವೈರುಧ್ಯಗಳು ಇವೆ. ಅಮ್ಮ 'ನಿನಗೆ ಜವಾಬ್ದಾರಿನೇ ಇಲ್ಲ' ಎಂದು ರಾಗ ಹಾಡುತ್ತಾರೆ. ಅವರು ಹೇಳುವ ಯಾವ ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ. ಅಪ್ಪ ಮಾತ್ರ ಓದುವ ಮಗಳು ಎಂದು ಬೆಂಬಲಿಸುತ್ತಾರೆ. ಮೈನಾ ಆಗಿ ಭರವಸೆಯನ್ನು ಕಳೆದುಕೊಳ್ಳುವುದಿಲ್ಲ. ಎಂತಹ ಸಂದರ್ಭ ಬಂದರೂ ಅದನ್ನು ನಗು ನಗುತ್ತಾ ಸ್ವೀಕರಿಸುತ್ತೇನೆ. ಯಶಸ್ಸು ತನಗಿದೆ ಎಂದೇ ನಂಬುತ್ತೇನೆ. ಏನೇ ಕಷ್ಟಗಳು ಬಂದರೂ ಪರಿಹಾರವೂ ಇದ್ದೇ ಇರುತ್ತದೆ ಎನ್ನುವುದನ್ನು ಬಲವಾಗಿ ಪ್ರತಿಪಾದಿಸುತ್ತೇನೆ. ಬಹುಶಃ ನಾವೆಲ್ಲ ನಿತ್ಯ ಜೀವನದಲ್ಲೂ ಹೀಗೆ ಹೇಳಿಕೊಳ್ಳುತ್ತೇವೆ.

◆ **ಮುಂದಿನ ದಿನಗಳ ಬಗ್ಗೆ ನಿಮ್ಮ ಕನಸುಗಳೇನು?**

ಒಳ್ಳೆಯ ಪಾತ್ರವನ್ನು ಮಾಡಬೇಕು. ಎಂದೂ ನಾನು ನಾಯಕಿಯೇ ಆಗಬೇಕು ಎಂದು ಯೋಚಿಸುವುದಿಲ್ಲ. ಸಿನಿಮಾಕ್ಕೂ ಹೋಗಬೇಕು ಎಂದುಕೊಂಡಿದ್ದೇನೆ. ಯಾವತ್ತೂ ಅಭಿನಯವನ್ನು ಬಯಸುವಂತಹ ಪಾತ್ರ ಸಿಗಬೇಕು ಎನ್ನುವ ಕನಸಿದೆ. ಅಭಿನಯಕ್ಕಾಗಿ ಯಾವುದೇ ತರಬೇತಿಯನ್ನು ನಾನು ಪಡೆದಿಲ್ಲ. ನಿರ್ದೇಶನದ ಬಗ್ಗೆ ಕೂಡ ಕುತೂಹಲ ಇದೆ. ತಾಂತ್ರಿಕವಾಗಿ ಅವಕಾಶ ಮತ್ತು ಒಳ್ಳೆಯ ತಂಡ ಸಿಕ್ಕರೆ ಅಲ್ಲೂ ತೊಡಗಿಸಿಕೊಳ್ಳಬೇಕು ಎನ್ನುವ ಆಲೋಚನೆ ಇದೆ.

■ **ರಾಘವೇಂದ್ರ ಕೆ.**